ಹುಡುಗರು ಮತ್ತು ಒಬ್ಬ ಪೊಲೀಸ್ ಕಾನ್‌ಸ್ಟೆಬಲ್ ಸತ್ತಿದ್ದಾರೆ ಅಂತ ಗೊತ್ತಾಗಿದೆ. ಸತ್ತವರಲ್ಲಿ ಒಬ್ಬನ ಹೆಸರು ವಿಜಯ್ ಅಂತೆ... ಅವನೇ ನಿಮ್ಮ ಅಜಯ್ ಆಗಿರಬಹುದೇ ಅಂತ ನಂಗೆ ಅನುಮಾನ! ಸಂಘಟನೆಯಲ್ಲಿರೋ ಹುಡುಗರು ಹೆಸರು ಬದಲಿಸಿಕೊಂಡು ಇಂಥ ಕೆಲಸಗಳನ್ನು ಮಾಡ್ತಾರೆ ಅನ್ನೋದು ನಿಮಗೂ ಗೊತ್ತಲ್ಲ...

ಡೆಡ್ ಬಾಡಿಗಳ ಫೋಟೊ ತೆಗೆಯೋಕೆ ಬಳ್ಳಾರಿ ಪೊಲೀಸರು ಬಿಡ್ತಿಲ್ಲವಂತೆ... ಅಂತ ಹೇಳಿ ಸ್ವಲ್ಪ ಹೊತ್ತು ಸುಮ್ಮನಿದ್ದು, ಸಂಜೆ ಮಾತಾಡ್ತೀನಿ ಅಂತ ಹೇಳಿ ಫೋನ್ ಕಟ್ ಮಾಡಿದ.

ಪ್ರೊಫೆಸರ್ ಸ್ವಲ್ಪಹೊತ್ತು ದಂಗು ಬಡಿದವರಂತೆ ಕೂತು ಬಿಟ್ಟರು. ಮುಂದೇನು ಮಾಡಬೇಕು ಆ ಕ್ಷಣಕ್ಕೆ ಅವರಿಗೆ ಹೊಳೆಯಲಿಲ್ಲ. ಸ್ವಲ್ಪ ಹೊತ್ತು ಸುಧಾರಿಸಿಕೊಂಡು ಬಳ್ಳಾರಿಯ ಅವರ ವಕೀಲ ಗೆಳೆಯ ಕಾಮೇಶ್ವರ್ ರಾವ್‌ಗೆ ಫೋನ್ ಮಾಡಿದರು.

'ನಂಗೂ ಸ್ವಲ್ಪ ಹೊತ್ತಿನ ಮೊದಲು ಪೇಪರ್ ಓದಿದ ಮೇಲೆ ಗೊತ್ತಾಯಿತು. ನಾಲ್ಕು ಜನ ಸತ್ತಿದಾರೆ ಅನ್ನೋದು ನಿಜ. ಬಾಡಿಗಳನ್ನು ಇನ್ನೂ ಯಾರೂ ಕ್ಲೈಮ್ ಮಾಡಿಲ್ಲವಂತೆ. ಅವೆಲ್ಲ ಮೆಡಿಕಲ್ ಕಾಲೇಜಿನ ಆಸ್ಪತ್ರೆ ಮಾರ್ಚರಿಯಲ್ಲಿವೆ. ಇವತ್ತು ನಂಗೆ ಮೂರು ಕೇಸ್‌ಗಳಿವೆ. ಲಂಚ್ ಅವರ್‌ನಲ್ಲಿ ಎಸ್‌ಪಿ ಸಾಹೇಬರನ್ನು ವಿಚಾರಿಸ್ತೀನಿ, ಸಂಜೆ ನಿಮಗೆ ಫೋನ್ ಮಾಡ್ತೀನಿ' ಎಂದು ಹೇಳುತ್ತ ರಾವ್ ಫೋನಿಟ್ಟ ಮೇಲೆ ಪ್ರೊಫೆಸರ್ ಮತ್ತೆ ಕೈಚೆಲ್ಲಿ ಕೂತು ಬಿಟ್ಟರು...

ಬಳ್ಳಾರಿಯ ಪತ್ರಕರ್ತರನ್ನು ವಿಚಾರಿಸಿದರೆ ಹೆಚ್ಚಿನ ಮಾಹಿತಿ ಸಿಗಬಹುದು ಅನ್ನಿಸಿತು. ಅವರಿಗೆ ಪರಿಚಯವಿದ್ದ ಪತ್ರಕರ್ತರು ನಿವೃತ್ತರಾಗಿದ್ದಾರೆ. ಹೊಸಬರ ಪರಿಚಯ ಅವರಿಗಿಲ್ಲ. ಯಾರನ್ನು ಕೇಳಿದರೆ ಸರಿಯಾದ ಮಾಹಿತಿ ಸಿಗಬಹುದು ಎನ್ನುವುದು ಗೊತ್ತಾಗದೆ ಚಡಪಡಿಸಿದರು.

ಬೇಕಾದ ಮಾಹಿತಿ ಸಿಗದೆ, ನಕಾರಾತ್ಮಕ ಯೋಚಿಸುತ್ತ ಚಡಪಡಿಕೆಯಲ್ಲೇ ಕಳೆಯುವುದು ಎಷ್ಟು ಕಷ್ಟ ಎನ್ನುವುದು ಅವರ ಅರಿವಿಗೆ ಬರತೊಡಗಿತು. ಸತ್ತವನ ಹೆಸರು ವಿಜಯ್ ಅಂತೆ, ಕನ್ಫರ್ಮ್ ಆಗದೆ ಅವನೇ ಅಜಯ್ ಅನ್ನೋ ತೀರ್ಮಾನಕ್ಕೆ ಬರೋದು ಬೇಡ ಎಂದು ಅವರ ಒಳಮನಸ್ಸು ಹೇಳುತ್ತಿತ್ತು.

ಸಂಜೆಯವರೆಗೂ ಮನೆಯಲ್ಲೇ ಫೋನಿಗಾಗಿ ಕಾದು ಕೂತಿದ್ದರು. ವೆಂಕಟನಾರಾಯಣನೂ ಇಲ್ಲ. ಕಾಮೇಶ್ವರ್ ರಾವ್ ಸಹ ಪತ್ತೆ ಇಲ್ಲ...

ಎನ್‌ಕೌಂಟರ್‌ನಲ್ಲಿ ಸತ್ತವರ ಮಾಹಿತಿಗಾಗಿ ಸಂಜೆಯವರೆಗೂ ಕಾದರು.

ಸಂಜೆ ಏಳರ ಹೊತ್ತಿಗೆ ವೆಂಕಟನಾರಾಯಣನೇ ಫೋನ್ ಮಾಡಿದ... 'ಗುರುವುಗಾರು, ಸರಿಯಾದ ಮಾಹಿತಿ ಸಿಗ್ತಾ ಇಲ್ಲ... ಹೆಣಗಳ ಫೋಟೊಗಳನ್ನು ರೈಲ್ವೆ ಪೊಲೀಸ್ ಸ್ಟೇಷನ್‌ನ ನೋಟಿಸ್ ಬೋರ್ಡ್‌ನಲ್ಲಿ ಹಾಕಿದ್ದಾರೆ. ಈಗ ಒಬ್ಬರನ್ನು ಕಳಿಸಿದ್ದೆ. ಮೊಬೈಲ್ ಕ್ಯಾಮೆರಾದಲ್ಲಿ ಆ ಫೋಟೊಗಳನ್ನು ಕ್ಲಿಕ್ ಮಾಡಿ ತಂದು ತೋರಿಸಿದರು. ಯಾರ ಮುಖಗಳ ಗುರುತೂ ಸರಿಯಾಗಿಲ್ಲ. ಎನ್‌ಕೌಂಟರ್ ಆದ ಎಷ್ಟೋ ಹೊತ್ತಿನ ಮೇಲೆ ಫೋಟೊ ತೆಗೆಸಿದ್ದಾರೆ. ಐಡೆಂಟಿಫೈ ಆಗಬಾರದು ಅಂತಲೇ ಹೀಗೆ ಮಾಡಿದ್ದಾರೆ...

ಸತ್ತವರು ರೈಲು ದರೋಡೆಗೆ ಬಂದಿದ್ದ ಬಿಹಾರಿಗಳಂತೆ. ಹದ್ದಿನಗುಂಡು ಸ್ಟೇಷನ್ ಹತ್ರ ರೈಲು ನಿಲ್ಲಿಸಿದರು ಅಂತ ಪೊಲೀಸರು ಹೇಳ್ತಾರೆ. ಅದು ದರೋಡೆ ಮಾಡೋ ಸ್ಪಾಟ್ ಅಲ್ಲ ಅನ್ನೋದು ಎಲ್ಲರಿಗೂ ಗೊತ್ತು. ಅವರು ನಿಲ್ಲಿಸಿದ್ದು ಷಟಲ್ ಟ್ರೈನ್‌ನಂತೆ. ಅದರಲ್ಲಿದ್ದವರೆಲ್ಲ ಬಡ ಬಗ್ಗರು. ಯಾರನ್ನೋ ಕೊಲೆ ಮಾಡೋ ಉದ್ದೇಶ ಅವರಿಗೆ ಇರಬಹುದು. ರೈಲು ಯಾಕೆ ನಿಲ್ಲಿಸಿದಿರಿ ಅಂತ ಕೇಳೋಕೆ ಹೋದ ಪೊಲೀಸನ ಮೇಲೆ ಫೈರ್ ಮಾಡಿದರಂತೆ. ಆ ಮೇಲೆ ಅವರ ಮೇಲೆ ಪೊಲೀಸರೂ ಫೈರ್ ಮಾಡಿದರು ಅಂತ ಹೇಳ್ತಾರೆ... ಏನು ನಡೀತು ಅನ್ನೋದು ಸರಿಯಾಗಿ ಯಾರಿಗೂ